

## ಕನ್ನಡ ತಾಯಿ

ಚೆಲುವೆಯರ, ಚೆನ್ನಿಗರ, ಹಿರಿಯ ತಾಯ್ ಮಕ್ಕಳಿರ, ಒಡಹುಟ್ಟಿದವರಾ,
ಒಸಗೆನುಡಿ ಕೇಳಿದಿರ, ತಾಳಿದರ ಎದೆಯಲ್ಲಿ, ತಾಳಿ ಬಾಳುವಿರಾ,
ನಾಡು ನುಡಿ ನಡೆಗಳನು ಮುನ್ನಡೆಗೆ ನಡಸುತ್ತ , ಮುಂದೆ ಸಾಗುವಿರಾ?
ಭಾರತದ, ಲೋಕದಾ ಮಕ್ಕಳಲಿ ಹಿರಿದಾಗಿ ತೂಕ ತೂಗುವಿರಾ?
ಬನ್ನಿ , ಓ ಮಕ್ಕಳಿರ,
ಒಕ್ಕೊರಲಲೆಲ್ಲರೂ ಕೂಗಿ ಈ ಒಕ್ಕೂಗ — ಈ ಹಿರಿಯ ಕೂಗ —
'ಸಿರಿಗನ್ನಡಂ ಗೆಲ್ಗೆ, ಹಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಗೆಲ್ಗೆ, ಬಾಳ್ಗೆ —
ಕನ್ನಡದ ತಾಯ್ ಗೆಲ್ಗೆ, ಬಾಳ್ಗೆ.'

*— ಬಿ.ಎಂ.ಶ್ರೀಕಂಠಯ್ಯ*

ಕನ್ನಡದ ನೆಲದ ಪುಲ್ಲೆನಗೆ ಪಾವನತುಲಸಿ!
ಕನ್ನಡದ ನೆಲದ ನೀರ್ವೊನಲೆನಗೆ ದೇವನದಿ!
ಕನ್ನಡದ ನೆಲದ ಕಲ್ಲೆನಗೆ ಶಾಲಗ್ರಾಮ ಶಿಲೆ! **ಕನ್ನಡಂ ದೈವಮೈ** !
ಕನ್ನಡದ ಶಬ್ದಮೆನಗೋಂಕಾರಮೀಯೆನ್ನ
ಕನ್ನಡದ ನುಡಿಯೆ ಗಾಯತ್ರಿಯದ್ಭುತಮಂತ್ರ -
ಮಿನ್ನಾವುದೈ ಪೆರತು ಕನ್ನಡದ ಸೇವೆಯಿಂದಧಿಕಮೀ ಜಗದೊಳೆನಗೆ?

*— ಸಾಲಿ ರಾಮಚಂದ್ರ ರಾಯ*

## ಸೂಕ್ತಿಪ್ರಭ

## ಜಪಾನೀ ಸೂಕ್ತಿಗಳು

ಒಂದು ವೇಳೆ ನಮ್ಮ ಕಣ್ಣುಗಳು ಕೊಳೆಯನ್ನು ನೋಡಬಹುದು; ಆದರೆ ನಮ್ಮ ಮನಸ್ಸು ಕೊಳೆಯನ್ನು ನೋಡದಿರಲಿ. ನಮ್ಮ ಕಿವಿಗಳು ಮಲಿನವಾದುದನ್ನು ಕೇಳಬಹುದು, ಆದರೆ ನಮ್ಮ ಮನಸ್ಸು ಮಲಿನವಾದುದನ್ನು ಕೇಳದಿರಲಿ.

-ಶಿಂಟೋ ವಿಚಾರಧಾರೆ

ವ್ಯಕ್ತಿಗಳ ಮನಸ್ಸು ಮಲಿನಗೊಂಡರೆ ಅವರಿರುವ ನಾಡೇ ಮಲಿನವಾಗುವುದು. ಅವರ ಮನಸ್ಸು ಶುದ್ಧವಾಗಿದ್ದರೆ, ಅವರ ನಾಡೂ ಶುದ್ಧವಾಗಿರುವುದು. ತಮ್ಮಷ್ಟಕ್ಕೆ ತಾವೇ ಶುದ್ಧ ಅಥವಾ ಅಶುದ್ಧವಾದ ನಾಡು ಎಂಬುದೇ ಇಲ್ಲ. ಅಲ್ಲಿರುವವರ ಮನಸ್ಸನ್ನೇ ಎಲ್ಲವೂ ಅವಲಂಬಿಸಿದೆ.

-ನಿಚಿರೆನ್ ದಾಯಿಶೊನಿನ್

ಪ್ರೀತಿಯಿಂದ ನಿರ್ಮಿಸಿದ್ದೇ ಆದರೆ, ಸಾಮಾನ್ಯ ದಿನಬಳಕೆಯ ವಸ್ತುವೂ ಸೌಂದರ್ಯದಿಂದ ತುಂಬಿ ತುಳುಕಾಡುವುದು.

-ಸೊಯೆತ್ಸು ಯನಗಿ

ಭಾರೀ ಸಂದೇಹದ ತಳದಲ್ಲಿ ಮಹಾನ್ ಎಚ್ಚರವೊಂದು ಅಡಗಿರುತ್ತದೆ. ಸಂಪೂರ್ಣವಾಗಿ ಸಂದೇಹಪಟ್ಟರೆ, ನೀವು ಸಂಪೂರ್ಣವಾಗಿ ಎಚ್ಚರಗೊಳ್ಳುವಿರಿ.

-ಹಾಕುಯಿನ್ ಎಕಾಕು

ಒಂದೇ ಒಂದು ಅನುಕಂಪದ ಮಾತು ಕೂಡ ಚಳಿಗಾಲದ ಮೂರು ತಿಂಗಳನ್ನು ಬೆಚ್ಚಗಾಗಿಸುವುದು.

-ಜಪಾನೀ ಗಾದೆ

ಜೀವನ ಮತ್ತು ಮರಣ ಎರಡೂ ಬಹಳ ಮುಖ್ಯವಾದ ಸಂಗತಿಗಳು. ಕಾಲ ವೇಗವಾಗಿ ಕಳೆದುಹೋಗುತ್ತಿದೆ; ಅದಕ್ಕೆ ತಕ್ಕಂತೆ ಅವಕಾಶಗಳೂ ಕಳೆದುಹೋಗುವವು. ಪ್ರತಿಯೊಬ್ಬರೂ ಜ್ಞಾನಕ್ಕಾಗಿ ಪ್ರಯತ್ನಿಸಬೇಕು. ಎಚ್ಚರಗೊಳ್ಳಿ, ಕಾಳಜಿ ಹೊಂದಿ, ಜೀವನವನ್ನು ವ್ಯರ್ಥವಾಗಿಸಬೇಡಿ.

-ದೋಜೆನ್